ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 793

ಸದಸ್ಯರ ಹೆಸರು : ಶ್ರೀ.ಎಸ್.ರವಿ

ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸುವ ದಿನಾಂಕ : 15.12.2020

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| ಅ | ರಾಜ್ಯದಲ್ಲಿ ಲಾಕ್ ಡೌನ್ ಸಂದರ್ಭದಲ್ಲಿ ಹೂವು, ಹಣ್ಣು ಮತ್ತು ತರಕಾರಿ ಬೆಳೆದ ರೈತರಿಗೆ ಆದ ನಷ್ಟದ ಪ್ರಮಾಣ ಎಷ್ಟು: | ಲಾಕ್ ಡೌನ್ ಸಂದರ್ಭದಲ್ಲಿ ರಾಜ್ಯದಲ್ಲಿ ಹೂವಿನ ಬೆಳೆಗಳಲ್ಲಿ ಅಂದಾಜು ಶೇ.50-90 ರಷ್ಟು ಮತ್ತು ಹಣ್ಣು ಮತ್ತು ತರಕಾರಿ ಬೆಳೆಗಳಲ್ಲಿ ಅಂದಾಜು ಶೇ.30-50 ರಷ್ಟು ಹಾನಿಯಾಗಿರುತ್ತವೆ. |
| ಆ | ಪಾಲಿಹೌಸ್ ಬೆಳೆಗಾರರಿಗೆ ಲಾಕ್ ಡೌನ್ ಸಂದರ್ಭದಲ್ಲಿ ಆದ ನಷ್ಟಕ್ಕೆ ಸರ್ಕಾರದಿಂದ ಪರಿಹಾರ ಘೋಷಣೆಯಾಗಿದೆಯೇ: ಹಾಗಿದ್ದಲ್ಲಿ, ಪ್ರತಿ ರೈತರಿಗೆ ನೀಡಿದ ಮೊತ್ತ ಎಷ್ಟು: (ತಾಲ್ಲೂಕುವಾರು ಮಾಹಿತಿ ನೀಡುವುದು) | ಹೌದು.<br>ರಾಜ್ಯದಲ್ಲಿ ಲಾಕ್ ಡೌನ್ ಸಂದರ್ಭದಲ್ಲಿ ತೀವ್ರತರವಾಗಿ ನಷ್ಟಕ್ಕೊಳಗಾದ ಪಾಲಿಹೌಸ್ ನಲ್ಲಿ ಹೂವಿನ ಬೆಳೆ ಬೆಳೆಯುವ ಪ್ರತಿ ಫಲಾನುಭವಿಗೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ.25,000/-ಗಳನ್ನು ಹಾಗೂ ತರಕಾರಿ ಬೆಳೆಗಳನ್ನು ಬೆಳೆಯುವ ಪ್ರತಿ ಫಲಾನುಭವಿಗೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ.15,000/-ಗಳನ್ನು ಪರಿಹಾರಧನವಾಗಿ ಒದಗಿಸಲಾಗಿರುತ್ತದೆ.<br>ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ | ಲಾಕ್ ಡೌನ್ ಸಂದರ್ಭದಲ್ಲಿ ಬೆಳೆ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ನೀಡಲು ಮಾರ್ಗಸೂಚಿಗಳೇನು; | ಮಾರ್ಗಸೂಚಿಗಳ ಪ್ರತಿಗಳನ್ನು ಅನುಬಂಧಿಸಲಾಗಿದೆ. |
| ಈ | ಬೆಳೆಸಮೀಕ್ಷೆಯಲ್ಲಿ ನಮೂದಾಗದ ಬೆಳೆಗಳಿಗೆ ಪರಿಹಾರ ನೀಡಲು ಅವಕಾಶವಿದೆಯೇ; ಅವಕಾಶಇದ್ದಲ್ಲಿ. ರೈತರು ಅನುಸರಿಸಬೇಕಾದ ಕ್ರಮಗಳೇನು? | ಬೆಳೆಸಮೀಕ್ಷೆಯಲ್ಲಿ ನಮೂದಾಗದ ಬೆಳೆಗಳಿಗೆ ಪರಿಹಾರ ನೀಡಲು ಅವಕಾಶವಿರುವುದಿಲ್ಲ. |

ನಂ: HORTI/515/HGM/2020-admn-Horti-Sec

(ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ

ಮತ್ತು ರೇಷ್ಮೆ ಸಚಿವರು

# ಅನುಬಂಧ-1

## ಪಾಲಿಹೌಸ್ ಬೆಳೆಗಾರರಿಗೆ ಲಾಕ್ ಡೌನ್ ಸಂದರ್ಭದಲ್ಲಿ ಆದ ನಷ್ಟಕ್ಕೆ ಸರ್ಕಾರದಿಂದ ಪರಿಹಾರ ಪಡೆದ ರೈತರ ವಿವರ

| ಕ್ರ.ಸಂ | ಜಿಲ್ಲೆ | ತಾಲೂಕು | ಫಲಾನುಭವಿಗಳ ಸಂಖ್ಯೆ | ಸಹಾಯಧನದ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|
| 1 | ತುಮಕೂರು | ತುರುವೇಕೆರೆ | 3 | 0.65000 |
| | | ಗುಬ್ಬಿ | 1 | 0.25000 |
| | | ಕುಣಿಗಲ್ | 1 | 0.19744 |
| | | ಪಾವಗಡ | 1 | 0.08250 |
| | | ತುಮಕೂರು | 3 | 0.48000 |
| 2 | ರಾಮನಗರ | ಚನ್ನಪಟ್ಟಣ | 1 | 0.10000 |
| | | ಮಾಗಡಿ | 4 | 0.57000 |
| | | ಕನಕಪುರ | 4 | 0.95000 |
| 3 | ಶಿವಮೊಗ್ಗ | ಶಿವಮೊಗ್ಗ | 7 | 0.94978 |
| | | ತೀರ್ಥಹಳ್ಳಿ | 1 | 0.09997 |
| | | ಹೊಸನಗರ | 1 | 0.07500 |
| 4 | ಬೆಂಗಳೂರು ನಗರ | ಆನೇಕಲ್ | 45 | 5.93930 |
| 5 | ಚಿಕ್ಕಬಳ್ಳಾಪುರ | ಗೌರಿಬಿದನೂರು | 7 | 1.64800 |
| | | ಶಿಡ್ಲಘಟ್ಟ | 2 | 0.28700 |
| | | ಗುಡಿಬಂಡೆ | 2 | 0.20000 |
| | | ಚಿಂತಾಮಣಿ | 2 | 0.18270 |
| | | ಚಿಕ್ಕಬಳ್ಳಾಪುರ | 2 | 0.30490 |
| 6 | ಬೆಂಗಳೂರು ಗ್ರಾಮಾಂತರ | ನೆಲಮಂಗಲ | 4 | 0.91000 |
| | | ಹೊಸಕೋಟೆ | 1 | 0.03249 |
| | | ದೇವನಹಳ್ಳಿ | 3 | 0.32500 |
| | | ದೊಡ್ಡಬಳ್ಳಾಪುರ | 67 | 23.06450 |
| 7 | ಧಾರವಾಡ | ಧಾರವಾಡ | 3 | 0.29920 |
| 8 | ಬೆಳಗಾವಿ | ಬೆಳಗಾವಿ | 1 | 0.09998 |
| | | ಬೈಲಹೊಂಗಲ | 1 | 0.11177 |
| | | ಚಿಕ್ಕೋಡಿ | 5 | 0.37550 |
| | | ಹುಕ್ಕೇರಿ | 1 | 0.08000 |
| 9 | ವಿಜಯಪುರ | ವಿಜಯಪುರ | 1 | 0.09997 |
| 10 | ಬಳ್ಳಾರಿ | ಕೂಡ್ಲಿಗಿ | 1 | 0.25000 |
| | | ಸಿರುಗುಪ್ಪ | 2 | 0.21120 |
| 11 | ಹಾಸನ | ಆಲೂರು | 4 | 3.00000 |
| 12 | ಮಂಡ್ಯ | ಮಂಡ್ಯ | 1 | 0.10000 |
| | | ಮಳವಳ್ಳಿ | 1 | 0.06000 |
| 13 | ಮೈಸೂರು | ಮೈಸೂರು | 1 | 0.08250 |

Scanned with CamScanner

## 2020-21 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ "ಹೂವಿನ ಬೆಳೆಗಾರರಿಗೆ ಪರಿಹಾರಧನ" ಕಾರ್ಯಕ್ರಮದ ಮಾರ್ಗಸೂಚಿ

ರಾಜ್ಯ ವಲಯ ಯೋಜನೆ ಲೆಕ್ಕ ಶೀರ್ಷಿಕೆ: 2401-00-111-0-08

### I. ಪೀಠಿಕೆ ಮತ್ತು ಹಿನ್ನೆಲೆ:

2019-20ನೇ ಸಾಲಿನ ಮಾರ್ಚ್ 2020 ತಿಂಗಳಿಂದ Covid-19 ನಿಂದಾಗಿ ರಾಜ್ಯದಲ್ಲಿ lock down ಮಾಡಿರುವ ಹಿನ್ನೆಲೆಯಲ್ಲಿ ಎಲ್ಲಾ ದೇವಾಲಯಗಳು ಮುಚ್ಚಿದ್ದು, ಹಬ್ಬ, ಮದುವೆ, ಸಭೆ ಸಮಾರಂಭಗಳು ಹಾಗೂ ಮತ್ತಿತರೆ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿದ್ದರಿಂದ ಹೂವಿನ ಬೆಳೆಗಳಿಗೆ ಬೇಡಿಕೆ ಇಲ್ಲದ ಕಾರಣ ಹೂ ಬೆಳೆಗಾರರು ತಾವು ಬೆಳೆದಂತಹ ಹೂಗಳನ್ನು ಕಟಾವು ಮಾಡದೆ ಬೆಳೆ ಹಾನಿಯಾಗಿರುತ್ತದೆ.

ರಾಜ್ಯದಲ್ಲಿ ಬೇಸಿಗೆ ಹಂಗಾಮಿನಲ್ಲಿ ಸುಮಾರು 12735 ಹೆಕ್ಟೇರ್ ಪ್ರದೇಶದಲ್ಲಿ ಅಲ್ಪಾವಧಿ (ಚೆಂಡು ಹೂವು, ಸೇವಂತಿಗೆ, ಆಸ್ಟರ್ ಇತ್ಯಾದಿ) ಹಾಗು ಬಹುವಾರ್ಷಿಕ (ಕನಕಾಂಬರ, ಗುಲಾಬಿ, ಮಲ್ಲಿಗೆ, ಕಾಕಡ, ಬರ್ಡ್ ಆಫ್ ಪ್ಯಾರಡೈಸ್, ಇತ್ಯಾದಿ) ಹೂ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ಅಂದಾಜು 37861 ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಅದೇ ರೀತಿ ಸುಮಾರು 650 ಹೆಕ್ಟೇರ್ ಸಂರಕ್ಷಿತ ಬೇಸಾಯದಲ್ಲಿ cut flowers (ಗುಲಾಬಿ, ಜರ್ಬೆರಾ, ಕಾರ್ನೇಷನ್, ಆರ್ಕಿಡ್ ಇತ್ಯಾದಿ)ಗಳನ್ನು ಬೆಳೆಯಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ 2020-21 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಲೆಕ್ಕ ಶೀರ್ಷಿಕೆ:2401-00-111-0-08 ರಡಿ "ಹೂವಿನ ಬೆಳೆಗಾರರಿಗೆ ಪರಿಹಾರಧನ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರೂ.3183.75 ಲಕ್ಷಗಳನ್ನು ಒದಗಿಸಲಾಗಿರುತ್ತದೆ.

### II. ಯೋಜನೆಯ ಉದ್ದೇಶ

ಕೋವಿಡ್-19ರ ಮೇರೆಗೆ ಲಾಕ್ ಡೌನ್ ವಿಧಿಸಲಾಗಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಬೆಳೆಯಲಾಗುತ್ತಿರುವ ಹೂವಿನ ಬೆಳೆಗಾರರಿಗೆ ಆದ ನಷ್ಟಕ್ಕೆ ತಾತ್ಕಾಲಿಕ ಪರಿಹಾರವಾಗಿ ಹಾಗೂ ಮುಂಬರುವ ದಿನಗಳಲ್ಲಿ ಹೂವು ಬೆಳೆಯನ್ನು ಉತ್ತೇಜಿಸಲು ಪ್ರೋತ್ಸಾಹಿಸುವುದು.

### III. ಸಹಾಯಧನ ವಿವರ :

2020-21 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ "ಹೂವಿನ ಬೆಳೆಗಾರರಿಗೆ ಪರಿಹಾಧನ" ಕಾರ್ಯಕ್ರಮದಡಿ ಪ್ರತಿ ಫಲಾನುಭವಿಗೆ ಗರಿಷ್ಠ 1 ಹೆಕ್ಟೇರ್ ಪ್ರದೇಶಕ್ಕೆ ರೂ.25,000/- ಮೀರದಂತೆ ಪರಿಹಾರಧನವನ್ನು ವಿತರಿಸುವುದು. ಮುಂದುವರಿದು, ಹೂ ಬೆಳೆಯ ವಿಸ್ತೀರ್ಣಕ್ಕೆ ಅನುಗುಣವಾಗಿ PRORATA ಆಧರಿಸಿ, ಪರಿಹಾರಧನವನ್ನು ವಿತರಿಸುವುದು.

Scanned with CamScanner

IV. ಅನುಷ್ಠಾನದ ವಿವರ:

ಸರ್ಕಾರದ ಆದೇಶ ಸಂಖ್ಯೆ:ತೋಇ 128 ತೋಸವಿ 2020, ಬೆಂಗಳೂರು, ದಿನಾಂಕ:08.05.2020 ರನ್ವಯ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಮತ್ತು ಹೋಬಳಿ ಮಟ್ಟದ ಸಮಿತಿಗಳನ್ನು ರಚಿಸುವುದು.

1. <u>ರಾಜ್ಯ ಮಟ್ಟದ ಸಮಿತಿ.</u>
   - ಕಾರ್ಯದರ್ಶಿಗಳು ತೋಟಗಾರಿಕೆ ಇಲಾಖೆ –ಅಧ್ಯಕ್ಷರು
   - ಆಯುಕ್ತರು, ಕೃಷಿ ಇಲಾಖೆ- ಸದಸ್ಯರು
   - ನಿರ್ದೇಶಕರು, ತೋಟಗಾರಿಕೆ ಇಲಾಖೆ- ಸದಸ್ಯರು
   - ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು)– ಸದಸ್ಯ ಕಾರ್ಯದರ್ಶಿಗಳು
   - ತೋಟಗಾರಿಕೆ ಜಂಟಿ ನಿರ್ದೇಶಕರು (HEG –PMU)– ಸದಸ್ಯರು
2. <u>ಜಿಲ್ಲಾ ಮಟ್ಟದ ಸಮಿತಿ.</u>
   - ಜಿಲ್ಲಾಧಿಕಾರಿಗಳು –ಅಧ್ಯಕ್ಷರು
   - ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳು – ಸದಸ್ಯರು,
   - ಸಂಬಂಧಪಟ್ಟ ತಹಸಿಲ್ದಾರರು – ಸದಸ್ಯರುಗಳು.
   - ಜಂಟಿ ಕೃಷಿ ನಿರ್ದೇಶಕರು
   - ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು
   - ತೋಟಗಾರಿಕೆ ಉಪ ನಿರ್ದೇಶಕರು – ಸದಸ್ಯ ಕಾರ್ಯದರ್ಶಿ.
3. <u>ತಾಲ್ಲೂಕು ಮಟ್ಟದ ಸಮಿತಿ.</u>
   - ತಹಸಿಲ್ದಾರ್ – ಅಧ್ಯಕ್ಷರು
   - ಸಹಾಯಕ ಕೃಷಿ ನಿರ್ದೇಶಕರು
   - ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು –ಸದಸ್ಯ ಕಾರ್ಯದರ್ಶಿಗಳು.
4. <u>ಹೋಬಳಿ ಮಟ್ಟದ ಸಮಿತಿ.</u>
   - ಸಹಾಯಕ ತೋಟಗಾರಿಕೆ ಅಧಿಕಾರಿ
   - ಕೃಷಿ ಅಧಿಕಾರಿ
   - ಗ್ರಾಮ ಲೆಕ್ಕಿಗರು



Scanned with CamScanner

V. ಜಿಲ್ಲಾ, ತಾಲ್ಲೂಕು ಮತ್ತು ಹೋಬಳಿ ಮಟ್ಟದ ಸಮಿತಿಗಳ ಕಾರ್ಯಾಭಾರಗಳು:

ಜಿಲ್ಲಾ ಮಟ್ಟದ ಸಮಿತಿಯ ಕರ್ತವ್ಯಗಳು.

- ಜಿಲ್ಲಾ ಮಟ್ಟದಲ್ಲಿ ಯೋಜನೆಯ ಬಗ್ಗೆ ವ್ಯಾಪಕವಾಗಿ ಪ್ರಚಾರ ಕೈಗೊಳ್ಳುವುದು.
- ಯೋಜನೆ ಅನುಷ್ಠಾನದಲ್ಲಿ ಹೋಬಳಿ ಹಾಗೂ ತಾಲ್ಲೂಕು ಮಟ್ಟದಲ್ಲಿ ನಿಗಧಿತ ಸಮಯದೊಳಗೆ ಹಾಗೂ ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ನಿರ್ದೇಶನ ನೀಡುವುದು.
- ಸಂಬಂಧಪಟ್ಟ ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಹೋಬಳಿ ಮಟ್ಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಂಡವನ್ನು ರಚಿಸುವ ಮೂಲಕ ಕ್ಷೇತ್ರ ತಪಾಸಣೆ ತ್ವರಿತವಾಗಿ ಕೈಗೊಳ್ಳುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ತಾಲ್ಲೂಕುಗಳಿಂದ ಪರಿಹಾರ ನೀಡಲು ತಯಾರಿಸಿರುವ ರೈತರುಗಳ ಪಟ್ಟಿಯನ್ನು ಪರಿಹಾರ ನೀಡುವ ಸಲುವಾಗಿ ಅನುಮೋದಿಸಿಕೊಡುವುದು.
- ತಾಲ್ಲೂಕು ಮಟ್ಟದ ಸಮಿತಿಯೊಂದಿಗೆ ಕಾಲಕಾಲಕ್ಕೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ನಿಗಧಿತ ಅವಧಿಯಲ್ಲಿ ಯೋಜನೆಯಡಿ ಆರ್ಥಿಕ/ಭೌತಿಕ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಕ್ರಮ ವಹಿಸುವುದು.

ತಾಲ್ಲೂಕು ಮಟ್ಟದ ಸಮಿತಿಯ ಕರ್ತವ್ಯಗಳು

- ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವುದು.
- ಹೋಬಳಿ ಮಟ್ಟದ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಪರಿಶೀಲಿಸಿ ಜಿಲ್ಲಾ ಸಮಿತಿಗೆ ಕಳುಹಿಸಲು ಕ್ರಮ ಕೈಗೊಳ್ಳುವುದು.
- ಕ್ಷೇತ್ರ ತಪಾಸಣೆಯು ಅರ್ಜಿ ಸಲ್ಲಿಕೆಯಾದ ಒಂದು ತಿಂಗಳೊಳಗಾಗಿ ಕೈಗೊಳ್ಳುವುದು.
- ಯಾವುದೇ ಕುಂದು ಕೊರತೆಗಳ ಬಗ್ಗೆ ಅರ್ಜಿಗಳು ಬಂದಲ್ಲಿ ಅವುಗಳ ವಿಲೇವಾರಿಗೆ ಕ್ರಮ ಕೈಗೊಳ್ಳುವುದು..
- ಕಾಲಕಾಲಕ್ಕೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಪ್ರಗತಿ ಪರಿಶೀಲನೆಯನ್ನು ನಡೆಸಿ ತಾಲ್ಲೂಕುವಾರು ಸಂಪೂರ್ಣ ವರದಿ ನೀಡುವುದು.

ಹೋಬಳಿ ಮಟ್ಟದ ಸಮಿತಿಯ ಕರ್ತವ್ಯಗಳು

- ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವುದು.
- RSK ಹಾಗೂ ಗ್ರಾಮ ಪಂಚಾಯಿತಿ ಸೂಚನಾ ಫಲಕದಲ್ಲಿ 2019ರ ಮುಂಗಾರು ಹಾಗು 2019ರ ಹಿಂಗಾರು ಬೆಳೆ ಸಮೀಕ್ಷೆಯ (crop survey) ರೈತರ ಪಟ್ಟಿಯನ್ನು ಪ್ರಕಟಿಸುವುದು.
- ಕ್ಷೇತ್ರ ಮಟ್ಟದಲ್ಲಿ ಮುಂಗಾರು/ಹಿಂಗಾರು ಬೆಳೆ ಸಮೀಕ್ಷೆಯಂತೆ ತಾಕುಗಳು ಇಲ್ಲದಿದ್ದ ಪಕ್ಷದಲ್ಲಿ ರೈತರಿಂದ ಅರ್ಜಿ ಪಡೆದು ಅಂತಹ ತಾಕುಗಳನ್ನು ಶೇ. 100ರಷ್ಟು ಸ್ಥಳ ಪರಿಶೀಲಿಸಿ ಮಹಜರ್ ಮಾಡಿ ಪಟ್ಟಿ ತಯಾರಿಸಿ, ಅನುಮೋದನೆಗೆ ಸಲ್ಲಿಸುವುದು.



Scanned with CamScanner

## VI. ಫಲಾನುಭವಿಗಳ ಆಯ್ಕೆ ಮತ್ತು ಅರ್ಹತೆ:

1. ರೈತರಿಗೆ ಅಲ್ಪಾವಧಿ ಪರಿಹಾರ ನೀಡಲು ಕರ್ನಾಟಕ ಸರ್ಕಾರದ ಇ-ಆಡಳಿತ ಪತಿಯಿಂದ ಕೈಗೊಳ್ಳಲಾದ 2019-20 ನೇ ಸಾಲಿನ ಹೂ ಬೆಳೆಗಳಿಗೆ ಹಿಂಗಾರು ಬೆಳೆ ಸಮೀಕ್ಷೆಯನ್ನು ಆಧಾರವಾಗಿರಿಸಿಕೊಳ್ಳುವುದು ಮತ್ತು ಬಹುವಾರ್ಷಿಕ ಬೆಳೆಗಳಿಗೆ 2019-20 ನೇ ಸಾಲಿನ ಮುಂಗಾರು ಬೆಳೆ ಸಮೀಕ್ಷೆಯನ್ನು ಆಧಾರವಾಗಿರಿಸಿಕೊಳ್ಳುವುದು.
2. ಮಾರ್ಚ್ 24 ನೇ ದಿನಾಂಕದ ನಂತರ ನಾಟಿ ಮಾಡಿರುವ ಹೂ ಬೆಳೆಗಾರರಿಗೆ ಸದರಿ ಯೋಜನೆಯಡಿಯಲ್ಲಿ ಪರಿಹಾರಕ್ಕೆ ಪರಗಣಿಸಲು ಅವಕಾಶವಿರುವುದಿಲ್ಲ.
3. ಸದರಿ ಸಮೀಕ್ಷೆಯಲ್ಲಿನ ಕನಿಷ್ಠ ಶೇ.10 ರಷ್ಟು ತಾಕುಗಳನ್ನು ತೋಟಗಾರಿಕೆ ಉಪ ನಿರ್ದೇಶಕರು ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಅಥವಾ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಪರಿಶೀಲಿಸಿ, ದೃಢೀಕರಿಸುವುದು.
4. ತಾಲ್ಲೂಕು ಮಟ್ಟದಲ್ಲಿ ಹೋಬಳಿವಾರು ಬೆಳೆ ಸಮೀಕ್ಷೆಯಲ್ಲಿನ ಹೂ ಬೆಳೆಗಾರರ ಧೃಢೀಕರಿಸಿದ ಪಟ್ಟಿಯನ್ನು ಗ್ರಾಮ ಪಂಚಾಯಿತಿ, ರೈತ ಸಂಪರ್ಕ ಕೇಂದ್ರ ಹಾಗೂ ತಾಲ್ಲೂಕು ಕಛೇರಿಯ ನಾಮಫಲಕದಲ್ಲಿ ಪ್ರದರ್ಶಿಸುವುದು. ಈ ಪಟ್ಟಿಯಲ್ಲಿ ವ್ಯತ್ಯಾಸಗಳಿದ್ದು, ರೈತರು ಆಕ್ಷೇಪಣೆಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಸಲ್ಲಿಸಲು ಒಂದು ವಾರ ಕಾಲಾವಕಾಶ ನೀಡುವುದು. ಅಂತಹ ಆಕ್ಷೇಪಣೆಗಳನ್ನು ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಅಥವಾ ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಸಲ್ಲಿಸುವುದು.
5. ಧೃಢೀಕರಿಸಿದ ಬೆಳೆ ಸಮೀಕ್ಷೆಯಲ್ಲಿನ ಹೂ ಬೆಳೆಗಾರರ ಪಟ್ಟಿಯನ್ನು ಬೆಳೆ ಪರಿಹಾರಧನ ನೀಡಲು ತಾಲ್ಲೂಕು ಮಟ್ಟದ ಸಮಿತಿಗೆ ಶಿಫಾರಸ್ಸು ಮಾಡುವುದು.
6. 2019-20ನೇ ಸಾಲಿನ ಮುಂಗಾರು/ಹಿಂಗಾರು ಬೆಳೆ ಸಮೀಕ್ಷೆಯಲ್ಲಿ ದಾಖಲಾಗಿರುವ ರೈತರು ಯಾವುದೇ ದಾಖಲಾತಿಗಳನ್ನು ನೀಡುವ ಅವಶ್ಯಕತೆ ಇರುವುದಿಲ್ಲ.
7. ಸದರಿ ಪಟ್ಟಿಯಲ್ಲಿ ದಾಖಲಾಗದೆ ಇರುವ ಹೂವು ಬೆಳೆಗಾರರಿದ್ದಲ್ಲಿ, ಅಂತಹ ರೈತರಿಂದ ಮಾತ್ರ ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ 10 ದಿನಗಳಲ್ಲಿ ಪಡೆಯುವುದು. ಸದರಿ ಅರ್ಜಿಗಳ ತಾಕುಗಳನ್ನು ಪರಿಶೀಲಿಸುವಾಗ ಹೆಚ್ಚಿನ ಮುತುವರ್ಜಿ ವಹಿಸುವುದು. ನಿಗದಿತ ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವುದು.

   I) ಪಹಣಿ (RTC)

   II) ಆಧಾರ್ ಕಾರ್ಡ್,ರೈತರ ಬ್ಯಾಂಕ್ ಖಾತೆ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.

   III)ಸ್ವಯಂ ಧೃಡೀಕೃತ ಘೋಷಣಾ ಪತ್ರ.
8. FRUITSನಲ್ಲಿ FID ದಾಖಲಾಗದೇ ಇದ್ದಲ್ಲಿ, ಸಂಬಂದಪಟ್ಟ ದಾಖಲೆಗಳನ್ನು ಪಡೆದು ಫಲಾನುಭವಿವಾರು FID ಸೃಷ್ಟಿಸುವುದು.
9. ದಾಖಲಾಗದೇ ಇರುವ ಹೂ ಬೆಳೆಗಾರರು ಸಲ್ಲಿಸಿದ ಅರ್ಜಿಗಳನ್ನು ಹೋಬಳಿ ಮಟ್ಟದ ಸಮಿತಿಯು ಶೇ.100 ರಷ್ಟು ತಾಕು ಪರಿಶೀಲನೆ ಕೈಗೊಂಡು ಧೃಢೀಕರಿಸಿ ತಾಲ್ಲೂಕು ಮಟ್ಟದ ಸಮಿತಿಗೆ ಶಿಫಾರಸ್ಸು ಮಾಡುವುದು.



Scanned with CamScanner

10. ತಾಲ್ಲೂಕು ಮಟ್ಟದ ಸಮಿತಿಯು ಹೋಬಳಿ ಮಟ್ಟದ ಸಮಿತಿಯಿಂದ ಶಿಫಾರಸ್ಸು ಮಾಡಿದ ಧೃಢೀಕರಿಸಿದ ಪಟ್ಟಿಯನ್ನು ಪರಿಶೀಲಿಸಿ, ಹೂ ಬೆಳೆ ಪರಿಹಾರಧನ ನೀಡಲು ಜಿಲ್ಲಾ ಮಟ್ಟದ ಸಮಿತಿಗೆ ಶಿಫಾರಸ್ಸು ಮಾಡಿ ಅನುಮೋದನೆ ಪಡೆಯುವುದು.

11. ಪರಿಹಾರಧನವನ್ನು ಜಿಲ್ಲಾ ಮಟ್ಟದ ತೋಟಗಾರಿಕೆ ಉಪ ನಿರ್ದೇಶಕರಿಗೆ ಬಿಡುಗಡೆ ಮಾಡುವುದು ಹಾಗು ಜಿಲ್ಲಾ ಸಮಿತಿಯು ಅನುಮೋದಿಸಿದ ಫಲಾನುಭವಿಗಳಿಗೆ ಬೆಳೆ ಪರಿಹಾರವನ್ನು DBT Portal ನಂತೆ ನೇರವಾಗಿ ಫಲಾನುಭವಿ ಖಾತೆಗೆ ECS ಮುಖಾಂತರ ಜಮಾ ಮಾಡುವುದು.

12. ಫಲಾನುಭವಿಯು ಹೂ ಬೆಳೆಗಾರರಾಗಿದ್ದು, ಕಡ್ಡಾಯವಾಗಿ RTC ಯು ಅವರ ಹೆಸರಿನಲ್ಲಿರಬೇಕು.

13. ಜಂಟಿ ಖಾತೆಯಾಗಿದ್ದಲ್ಲಿ ಎಲ್ಲಾ ಖಾತೆದಾರರ ಒಪ್ಪಿಗೆ ಪತ್ರ ಸಲ್ಲಿಸಬೇಕು (Notary ಯೊಂದಿಗೆ).

14. RTC ದಾರರು ಮರಣ ಹೊಂದಿದ್ದಲ್ಲಿ ಅವರ ಮಕ್ಕಳು ಅಥವಾ ಸಂಬಂಧಿಸಿದವರು ಗ್ರಾಮ ಲೆಕ್ಕಿಗರಿಂದ ಮರಣ ದೃಢೀಕರಣ ಪತ್ರ ಪಡೆದು ಪರಿಹಾರಧನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಹೋಬಳಿ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಅವರ ಕುಟುಂಬದ ಒಪ್ಪಿಗೆ ಪತ್ರ ಪಡೆದು ಪ್ರೋತ್ಸಾಹಧನ ವಿತರಿಸುವುದು.

15. ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.

16. ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಯಾವುದೇ ಸ್ಪಷ್ಟೀಕರಣದ ಅಗತ್ಯವಿದ್ದಲ್ಲಿ ತೋಟಗಾರಿಕೆ ಜಂಟಿ ನಿರ್ದೇಶಕರು (HEG-PMU) ಮತ್ತು ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು ಮತ್ತು ಪುಷ್ಪಾಭಿವೃದ್ಧಿ) ರವರನ್ನು ಸಂಪರ್ಕಿಸುವುದು.

17. ಕಾಲ ಕಾಲಕ್ಕೆ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಚರ್ಚಿಸಿ ಯೋಜನೆ ಅನುಷ್ಠಾನಗೊಳಿಸುವುದು ಹಾಗೂ ಪ್ರಗತಿ ಪರಿಶೀಲಿಸುವುದು.

18. ಸದರಿ ಕಾರ್ಯಕ್ರಮದ ಪ್ರಗತಿ ವರದಿಯನ್ನು ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು ಮತ್ತು ಪುಷ್ಪಾಭಿವೃದ್ಧಿ) ರವರಿಗೆ ಕಳುಹಿಸುವುದು.

## VII. ಅನುಬಂಧಗಳು:

1. ಅರ್ಜಿ ನಮೂನೆ
2. 2020-21ನೇ ಸಾಲಿನ ಹೂವಿನ ಬೆಳೆಗಾರರಿಗೆ ಪರಿಹಾರಧನ ಕಾರ್ಯಕ್ರಮದಡಿ ತಾತ್ಕಾಲಿಕವಾಗಿ ಪರಿಗಣಿಸಲಾಗಿರುವ ಜಿಲ್ಲಾವಾರು ಹೂವಿನ ಬೆಳೆಗಳ ವಿಸ್ತೀರ್ಣದ ವಿವರಗಳು.



Scanned with CamScanner

VIII. <u>ಅರ್ಜಿಯೊಡನೆ ಫಲಾನುಭವಿಗಳು ಸಲ್ಲಿಸಬೇಕಾಗಿರುವ ದಾಖಲಾತಿ ವಿವರಗಳು:</u>

i. ಬೆಳೆ ಸಮೀಕ್ಷೆಯಲ್ಲಿ ನಮೂದಾಗದ ರೈತ ಫಲಾನುಭವಿಯು ಪರಿಹಾರಧನಕ್ಕೆ ನಿಗದಿಪಡಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸುವುದು.

ii. ಆಯ್ಕೆಯಾದ ರೈತ ಫಲಾನುಭವಿಯು ಹೂ ಬೆಳೆಗಾರನಾಗಿರುವುದಕ್ಕೆ ಬೆಳೆ ನಮೂದಿಸಿರುವ RTC ಮೂಲ ಪ್ರತಿಯನ್ನು ಸಲ್ಲಿಸತಕ್ಕದ್ದು.

iii. ಪರಿಹಾರಧನವನ್ನು ಇತರರ ಹೆಸರಿನಲ್ಲಿ ಪಡೆದುಕೊಂಡು ದುರುಪಯೋಗ ಪಡಿಸಿಕೊಳ್ಳುವುದಿಲ್ಲವೆಂದು ಸ್ವಯಂ ಘೋಷಿತ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಮೇಲಿನ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.

ನಿರ್ದೇಶಕರು



Scanned with CamScanner

## 2020-21 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ "ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರಧನ" ಕಾರ್ಯಕ್ರಮದ ಮಾರ್ಗಸೂಚಿ

**ರಾಜ್ಯ ವಲಯ ಯೋಜನೆ ಲೆಕ್ಕ ಶೀರ್ಷಿಕೆ: 2401-00-111-0-08** (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ)

**2401-00-800-2-48** (ಕೃಷಿ ಭಾಗ್ಯ ಯೋಜನೆ)

**I. ಪೀಠಿಕೆ ಮತ್ತು ಹಿನ್ನೆಲೆ:**

2019-20ನೇ ಸಾಲಿನ ಮಾರ್ಚ್, 2020 ರಿಂದ ಕೋವಿಡ್-19 ನಿಂದಾಗಿ ರಾಜ್ಯಾದ್ಯಂತ ಸಂಪೂರ್ಣ ಲಾಕ್ ಡೌನ್ ಆದ ಕಾರಣ ರಾಜ್ಯದಲ್ಲಿ ಕೂಲಿ ಕಾರ್ಮಿಕರ ಅಭಾವದಿಂದಾಗಿ ಹಣ್ಣು ಮತ್ತು ತರಕಾರಿ ಬೆಳೆಗಳ ಕಟಾವು, ಸಾಗಾಣಿಕೆ, ಮಾರಾಟ ಹಾಗೂ ಸಂಸ್ಕರಣೆ ಮಾಡಲು ಸಾಧ್ಯವಾಗಿರುವುದಿಲ್ಲ. ಅಲ್ಲದೇ, ಕೋವಿಡ್ ಪೂರ್ವದಲ್ಲಿ ರಾಜ್ಯದಲ್ಲಿ ಬೆಳೆಯಲಾಗಿದ್ದ, ಹಣ್ಣು ಮತ್ತು ತರಕಾರಿಗಳಿಗೆ ಉತ್ತಮ ಧಾರಣೆ ದೊರೆತಿದ್ದು, ಕರ್ನಾಟಕ ರಾಜ್ಯದ ಜೊತೆಗೆ ಹೊರ ರಾಜ್ಯ ಹಾಗೂ ಕೆಲವೊಮ್ಮೆ ಹೊರ ದೇಶಗಳಿಗೂ ಸಹ ಮಾರಾಟವಾಗಿರುವುದು ಕಂಡುಬಂದಿರುತ್ತದೆ.

ಕೋವಿಡ್ ನಂತರದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬೇಡಿಕೆಯಿಲ್ಲದ ಕಾರಣ ಕೆಲವು ಹಣ್ಣು ಮತ್ತು ತರಕಾರಿ ಬೆಳೆಗಳ ಧಾರಣೆಯು ಕುಸಿತ ಕಂಡು ಬಂದಿರುತ್ತದೆ. ಸಾರಿಗೆಯ ಅಭಾವದಿಂದ ಹಾಗೂ ಲಾಕ್ ಡೌನ್ ಕಾರಣದಿಂದ ಹೊರ ರಾಜ್ಯ ಹಾಗೂ ಹೊರ ದೇಶಗಳಿಗೂ ಮಾರಾಟ ಮಾಡಲು ಹಿನ್ನಡೆಯಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ರಾಜ್ಯದ ರೈತರಿಗೆ ಆರ್ಥಿಕವಾಗಿ ಬಹಳಷ್ಟು ನಷ್ಟವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ತೋಇ 132 ತೋಸವಿ 2020(ಭಾಗ), ಬೆಂಗಳೂರು. ದಿನಾಂಕ:27.05.2020 ರನ್ವಯ 2020-21 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ: 2401-00-111-0-08 ರಡಿ ಮತ್ತು ಕೃಷಿ ಭಾಗ್ಯ ಯೋಜನೆ ಲೆಕ್ಕ ಶೀರ್ಷಿಕೆ: 2401-00-800-2-48 ರಡಿ "ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರಧನ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ.

ಹಣ್ಣಿನ ಬೆಳೆಗಳಾದ ಬಾಳೆ ,ಪಪ್ಪಾಯ, ದ್ರಾಕ್ಷಿ (Table) (ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರ ಜಿಲ್ಲೆಗಳಿಗೆ ಮಾತ್ರ), ಅಂಜೂರ, ಅನಾನಸ್, ಕಲ್ಲಂಗಡಿ ಮತ್ತು ಕರಬೂಜ ಮಾತ್ರ ಮತ್ತು ತರಕಾರಿ ಬೆಳೆಗಳಾದ ಟೊಮೋಟೋ, ಹಸಿರು ಮೆಣಸಿನ ಕಾಯಿ, ಹೂಕೋಸು,

ಎಲೆಕೋಸು, ಸಿಹಿಗುಂಬಳ, ಬೂದುಗುಂಬಳ, ಕ್ಯಾರೇಟ್, ಈರುಳ್ಳಿ, ದಪ್ಪಮೆಣಸಿನಕಾಯಿ ಮಾತ್ರ ಪರಿಹಾರಕ್ಕಾಗಿ ಪರಿಗಣಿಸುವುದು.

ಕಲ್ಲಂಗಡಿ ಮತ್ತು ಕರಬೂಜ ಬೇಸಿಗೆ ಬೆಳೆಯಾಗಿದ್ದು, ಬೆಳೆ ಸಮೀಕ್ಷೆಯಲ್ಲಿ ನಮೂದಾಗಿಲ್ಲದಿದ್ದ ಪಕ್ಷದಲ್ಲಿ ರೈತರಿಂದ ಅರ್ಜಿ ಪಡೆದು ಅಂತಹ ತಾಕುಗಳನ್ನು ಶೇ. 100ರಷ್ಟು ಸ್ಥಳ ಪರಿಶೀಲಿಸಿ ಮಹಜರ್ ಮಾಡಿ ಪಟ್ಟಿ ತಯಾರಿಸಿ, ಅನುಮೋದನೆಗೆ ಸಲ್ಲಿಸುವುದು.

ಬಾಳೆ ಹಾಗೂ ಈರುಳ್ಳಿ ಬೆಳೆಗೆ ಸಂಬಂಧಿಸಿದಂತೆ, 2020 ಮಾರ್ಚ್ 2ನೇ ವಾರದ ನಂತರ ಕಟಾವಿಗೆ ಬಂದಿರುವ ಫಸಲಿಗೆ ಮಾತ್ರ ಪರಿಹಾರ ನೀಡುವುದು. ಅಂತಹ ರೈತರಿಂದ ಅರ್ಜಿ ಪಡೆದು, ತಾಕುಗಳನ್ನು ಶೇ. 100ರಷ್ಟು ಸ್ಥಳ ಪರಿಶೀಲಿಸಿ ಮಹಜರ್ ಮಾಡಿ ಪಟ್ಟಿ ತಯಾರಿಸಿ, ಅನುಮೋದನೆಗೆ ಸಲ್ಲಿಸುವುದು.

**ಯೋಜನೆಯ ಉದ್ದೇಶ**

ಕೋವಿಡ್-19 ಹರಡುವಿಕೆ ತಡೆಗಟ್ಟಲು ಲಾಕ್ ಡೌನ್ ವಿಧಿಸಲಾಗಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಬೆಳೆಯಲಾಗುತ್ತಿರುವ ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಆದ ನಷ್ಟಕ್ಕೆ ತಾತ್ಕಾಲಿಕ ಪರಿಹಾರವಾಗಿ ಹಾಗೂ ಮುಂಬರುವ ದಿನಗಳಲ್ಲಿ ಹಣ್ಣು ಮತ್ತು ತರಕಾರಿ ಬೆಳೆಗಳನ್ನು ಉತ್ತೇಜಿಸಲು ಪ್ರೋತ್ಸಾಹಿಸುವುದು.

**II. ಸಹಾಯಧನ ವಿವರ :**

2020-21 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ " ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರಧನ" ಕಾರ್ಯಕ್ರಮದಡಿ ಪ್ರತಿ ಫಲಾನುಭವಿಗೆ ಗರಿಷ್ಠ 1 ಹೆಕ್ಟೇರ್ ಪ್ರದೇಶಕ್ಕೆ ರೂ.15,000/- ಮೀರದಂತೆ ಹಾಗೂ ಕನಿಷ್ಠ ರೂ.2000/- ಪರಿಹಾರಧನವನ್ನು ವಿತರಿಸುವುದು. ಮುಂದುವರಿದು, ಹಣ್ಣು ಮತ್ತು ತರಕಾರಿ ಬೆಳೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ PRORATA ಆಧರಿಸಿ ಪರಿಹಾರಧನವನ್ನು ವಿತರಿಸುವುದು.

**III. ಅನುಷ್ಠಾನದ ವಿವರ:**

ಸರ್ಕಾರದ ಆದೇಶ ಸಂಖ್ಯೆ:ತೋಇ 132 ತೋಸವಿ 2020(ಭಾಗ), ಬೆಂಗಳೂರು. ದಿನಾಂಕ:27.05.2020 ರನ್ವಯ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಮತ್ತು ಹೋಬಳಿ ಮಟ್ಟದ ಸಮಿತಿಗಳನ್ನು ರಚಿಸುವುದು.

1. **ಜಿಲ್ಲಾ ಮಟ್ಟದ ಸಮಿತಿ.**

- ಜಿಲ್ಲಾಧಿಕಾರಿಗಳು –ಅಧ್ಯಕ್ಷರು
- ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳು – ಸದಸ್ಯರು
- ಎಲ್ಲಾ ತಾಲ್ಲೂಕಿನ ತಹಸೀಲ್ದಾರರು – ಸದಸ್ಯರುಗಳು
- ಜಂಟಿ ಕೃಷಿ ನಿರ್ದೇಶಕರು
- ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು
- ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ.) – ಸದಸ್ಯ ಕಾರ್ಯದರ್ಶಿ

2. **ತಾಲ್ಲೂಕು ಮಟ್ಟದ ಸಮಿತಿ.**

- ತಹಸೀಲ್ದಾರ್ – ಅಧ್ಯಕ್ಷರು
- ಸಹಾಯಕ ಕೃಷಿ ನಿರ್ದೇಶಕರು
- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) – ಸದಸ್ಯ ಕಾರ್ಯದರ್ಶಿಗಳು

3. **ಹೋಬಳಿ ಮಟ್ಟದ ಸಮಿತಿ.**

- ಸಹಾಯಕ ತೋಟಗಾರಿಕೆ ಅಧಿಕಾರಿ
- ಕೃಷಿ ಅಧಿಕಾರಿ
- ಗ್ರಾಮ ಲೆಕ್ಕಿಗರು

## IV. ಜಿಲ್ಲಾ, ತಾಲ್ಲೂಕು ಮತ್ತು ಹೋಬಳಿ ಮಟ್ಟದ ಸಮಿತಿಗಳ ಕಾರ್ಯಾಭಾರಗಳು:

**ಜಿಲ್ಲಾ ಮಟ್ಟದ ಸಮಿತಿಯ ಕರ್ತವ್ಯಗಳು.**

- ಜಿಲ್ಲಾ ಮಟ್ಟದಲ್ಲಿ ಯೋಜನೆಯ ಬಗ್ಗೆ ವ್ಯಾಪಕವಾಗಿ ಪ್ರಚಾರ ಕೈಗೊಳ್ಳುವುದು.
- ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಹೋಬಳಿ ಹಾಗೂ ತಾಲ್ಲೂಕು ಮಟ್ಟದಲ್ಲಿ ನಿಗಧಿತ ಸಮಯದೊಳಗೆ ಹಾಗೂ ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ನಿರ್ದೇಶನ ನೀಡುವುದು.
- ಸಂಬಂಧಪಟ್ಟ ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಹೋಬಳಿ ಮಟ್ಟದಲ್ಲಿ ಅಗತ್ಯಕ್ಕನುಗುಣವಾಗಿ ಹೆಚ್ಚಿನ ಸಂಖ್ಯೆಯಲ್ಲಿ ತಂಡವನ್ನು ರಚಿಸುವ ಮೂಲಕ ಕ್ಷೇತ್ರ ತಪಾಸಣೆ ತ್ವರಿತವಾಗಿ ಕೈಗೊಳ್ಳುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ತಾಲ್ಲೂಕುಗಳಿಂದ ಪರಿಹಾರ ನೀಡಲು ತಯಾರಿಸಿರುವ ರೈತರುಗಳ ಪಟ್ಟಿಯನ್ನು ಪರಿಹಾರ ನೀಡುವ ಸಲುವಾಗಿ ಅನುಮೋದಿಸುವುದು.

- ತಾಲ್ಲೂಕು ಮಟ್ಟದ ಸಮಿತಿಯೊಂದಿಗೆ ಕಾಲಕಾಲಕ್ಕೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ನಿಗದಿತ ಅವಧಿಯಲ್ಲಿ ಯೋಜನೆಯಡಿ ಆರ್ಥಿಕ/ಭೌತಿಕ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಕ್ರಮ ವಹಿಸುವುದು.

**ತಾಲ್ಲೂಕು ಮಟ್ಟದ ಸಮಿತಿಯ ಕರ್ತವ್ಯಗಳು**

- ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವುದು.
- ಹೋಬಳಿ ಮಟ್ಟದ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಪರಿಶೀಲಿಸಿ ಜಿಲ್ಲಾ ಸಮಿತಿಗೆ ಶಿಫಾರಸ್ಸು ಮಾಡಿ ಕಳುಹಿಸಲು ಕ್ರಮ ಕೈಗೊಳ್ಳುವುದು.
- ಕ್ಷೇತ್ರ ತಪಾಸಣೆಯನ್ನು ಅರ್ಜಿ ಸಲ್ಲಿಕೆಯಾದ ಒಂದು ತಿಂಗಳೊಳಗಾಗಿ ಕೈಗೊಳ್ಳುವುದು.
- ಯಾವುದೇ ಕುಂದು ಕೊರತೆಗಳ ಬಗ್ಗೆ ಅರ್ಜಿಗಳು ಬಂದಲ್ಲಿ ಅವುಗಳ ವಿಲೇವಾರಿಗೆ ಕ್ರಮ ಕೈಗೊಳ್ಳುವುದು.
- ಕಾಲಕಾಲಕ್ಕೆ ಸಂಬಂಧಪಟ್ಟ ಹೋಬಳಿಗಳ ಪ್ರಗತಿ ಪರಿಶೀಲನೆಯನ್ನು ನಡೆಸಿ ತಾಲ್ಲೂಕುವಾರು ಸಂಪೂರ್ಣ ವರದಿ ನೀಡುವುದು.

**ಹೋಬಳಿ ಮಟ್ಟದ ಸಮಿತಿಯ ಕರ್ತವ್ಯಗಳು**

- ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವುದು.
- ರೈತ ಸಂಪರ್ಕ ಕೇಂದ್ರ (RSK) ಹಾಗೂ ಗ್ರಾಮ ಪಂಚಾಯಿತಿ ಸೂಚನಾ ಫಲಕದಲ್ಲಿ 2019ರ ಮುಂಗಾರು ಹಾಗು 2019ರ ಹಿಂಗಾರು ಬೆಳೆ ಸಮೀಕ್ಷೆಯ (crop survey) ರೈತರ ಪಟ್ಟಿಯನ್ನು ಪ್ರಕಟಿಸುವುದು.
- **ಕಲ್ಲಂಗಡಿ ಮತ್ತು ಕರಬೂಜ ಬೇಸಿಗೆ ಬೆಳೆಯಾಗಿದ್ದು, ಬೆಳೆ ಸಮೀಕ್ಷೆಯಲ್ಲಿ ನಮೂದಾಗಿಲ್ಲದಿದ್ದ ಪಕ್ಷದಲ್ಲಿ ರೈತರಿಂದ ಅರ್ಜಿ ಪಡೆದು ಅಂತಹ ತಾಕುಗಳನ್ನು ಶೇ. 100ರಷ್ಟು ಸ್ಥಳ ಪರಿಶೀಲಿಸಿ ಮಹಜರ್ ಮಾಡಿ** ಪಟ್ಟಿ ತಯಾರಿಸಿ, ಅನುಮೋದನೆಗೆ ಸಲ್ಲಿಸುವುದು.
- **ಬಾಳೆ ಹಾಗೂ ಈರುಳ್ಳಿ ಬೆಳೆಗೆ ಸಂಬಂಧಿಸಿದಂತೆ, 2020 ಮಾರ್ಚ್ 2ನೇ ವಾರದ ನಂತರ ಕಟಾವಿಗೆ ಬಂದಿರುವ ಫಸಲಿಗೆ ಮಾತ್ರ ಪರಿಹಾರ ನೀಡುವುದು. ಅಂತಹ ರೈತರಿಂದ ಅರ್ಜಿ ಪಡೆದು, ತಾಕುಗಳನ್ನು ಶೇ. 100ರಷ್ಟು ಸ್ಥಳ ಪರಿಶೀಲಿಸಿ ಮಹಜರ್ ಮಾಡಿ** ಪಟ್ಟಿ ತಯಾರಿಸಿ, ಅನುಮೋದನೆಗೆ ಸಲ್ಲಿಸುವುದು.

**ಫಲಾನುಭವಿಗಳ ಆಯ್ಕೆ ಮತ್ತು ಅರ್ಹತೆ:**

1. ರೈತರಿಗೆ ಪರಿಹಾರ ನೀಡಲು ಕರ್ನಾಟಕ ಸರ್ಕಾರದ ಇ-ಆಡಳಿತ ವತಿಯಿಂದ ಕೈಗೊಳ್ಳಲಾದ 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಬೆಳೆ ಸಮೀಕ್ಷೆಯನ್ನು ಆಧಾರವಾಗಿರಿಸಿಕೊಳ್ಳುವುದು.
2. ಮಾರ್ಚ್, 4ನೇ ವಾರ ನಂತರ ನಾಟಿ ಮಾಡಿರುವ ತರಕಾರಿ ಬೆಳೆಗಾರರನ್ನು ಸದರಿ ಯೋಜನೆಯಡಿಯಲ್ಲಿ ಪರಿಹಾರಕ್ಕೆ ಪರಿಗಣಿಸಲು ಅವಕಾಶವಿರುವುದಿಲ್ಲ.
3. **ಅದೇ ರೀತಿ ಲಾಕ್ ಡೌನ್ ಸಮಯದಲ್ಲಿ ಹಣ್ಣು ಮತ್ತು ತರಕಾರಿ ಬೆಳೆಗಳು ಕಟಾವು ಬಂದಿರುವ ಬಗ್ಗೆ ರೈತರಿಂದ ಸ್ವಯಂ ದೃಢೀಕರಣ ಪತ್ರವನ್ನು ಪಡೆಯುವುದು.**
4. ಬೆಳೆ ಸಮೀಕ್ಷೆಯಲ್ಲಿನ ಮಾಹಿತಿ ಆಧರಿಸಿ ಕನಿಷ್ಠ ಶೇ.10 ರಷ್ಟು ತಾಕುಗಳನ್ನು ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ.) ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ಅಥವಾ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಪರಿಶೀಲಿಸಿ, ದೃಢೀಕರಿಸುವುದು.
5. ತಾಲ್ಲೂಕು ಮಟ್ಟದಲ್ಲಿ ಹೋಬಳಿವಾರು ಬೆಳೆ ಸಮೀಕ್ಷೆಯಲ್ಲಿನ ಹಣ್ಣು ಮತ್ತು ತರಕಾರಿ ಬೆಳೆಗಾರರ ಧೃಢೀಕರಿಸಿದ ಪಟ್ಟಿಯನ್ನು ಗ್ರಾಮ ಪಂಚಾಯಿತಿ, ರೈತ ಸಂಪರ್ಕ ಕೇಂದ್ರ ಹಾಗೂ ತಾಲ್ಲೂಕು ಕಛೇರಿಯ ನಾಮಫಲಕದಲ್ಲಿ ಪ್ರದರ್ಶಿಸುವುದು. ಈ ಪಟ್ಟಿಯಲ್ಲಿ ವ್ಯತ್ಯಾಸಗಳಿದ್ದು, ರೈತರು ಆಕ್ಷೇಪಣೆಗಳನ್ನು ಸಲ್ಲಿಸಿದಲ್ಲಿ ಅಂತಹ ಆಕ್ಷೇಪಣೆಗಳನ್ನು ಸಲ್ಲಿಸಲು ಎರಡು ವಾರಗಳ ಕಾಲಾವಕಾಶ ನೀಡುವುದು. ಅಂತಹ ಆಕ್ಷೇಪಣೆಗಳನ್ನು ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಅಥವಾ ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಸಲ್ಲಿಸುವುದು.
6. ಧೃಢೀಕರಿಸಿದ ಬೆಳೆ ಸಮೀಕ್ಷೆಯಲ್ಲಿನ ಹಣ್ಣು ಮತ್ತು ತರಕಾರಿ ಬೆಳೆಗಾರರ ಪಟ್ಟಿಯನ್ನು ಬೆಳೆ ಪರಿಹಾರಧನ ನೀಡಲು ತಾಲ್ಲೂಕು ಮಟ್ಟದ ಸಮಿತಿಗೆ ಶಿಫಾರಸ್ಸು ಮಾಡುವುದು.
7. 2019-20ನೇ ಸಾಲಿನ ಮುಂಗಾರು/ಹಿಂಗಾರು ಬೆಳೆ ಸಮೀಕ್ಷೆಯಲ್ಲಿ ದಾಖಲಾಗಿರುವ ರೈತರು ಯಾವುದೇ ದಾಖಲಾತಿಗಳನ್ನು ನೀಡುವ ಅವಶ್ಯಕತೆ ಇರುವುದಿಲ್ಲ.
8. ಫಲಾನುಭವಿಯ ಆಯ್ಕೆಯನ್ನು ಹಾಲಿ ಲಭ್ಯವಿರುವ 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಬೆಳೆ ಸಮೀಕ್ಷೆಯ ಅನುಗುಣವಾಗಿ ಮಾತ್ರ ಪರಿಗಣಿಸತಕ್ಕದ್ದು. ಆದರೆ, ಕಲ್ಲಂಗಡಿ ಮತ್ತು ಕರಬೂಜ ಬೇಸಿಗೆ ಬೆಳೆಯಾಗಿದ್ದು, ಬೆಳೆ ಸಮೀಕ್ಷೆಯಲ್ಲಿ ನಮೂದಾಗಿಲ್ಲದಿದ್ದರೆ, ರೈತರಿಂದ ಅರ್ಜಿ ಪಡೆದು **ಅಂತಹ ತಾಕುಗಳನ್ನು ಶೇ. 100ರಷ್ಟು ಸ್ಥಳ ಪರಿಶೀಲಿಸಿ ಮಹಜರ್ ಮಾಡಿ** ಪಟ್ಟಿ ತಯಾರಿಸಿ, ಅನುಮೋದನೆಗೆ ಸಲ್ಲಿಸುವುದು.

9. ಬಾಳೆ ಹಾಗೂ ಈರುಳ್ಳಿ ಬೆಳೆಗೆ ಸಂಬಂಧಿಸಿದಂತೆ, ಮಾರ್ಚ್ 2ನೇ ವಾರದ ನಂತರ ಕಟಾವಿಗೆ ಬಂದಿರುವ ಫಸಲಿಗೆ ಮಾತ್ರ ಪರಿಹಾರ ನೀಡುವುದು. **ಅಂತಹ ತಾಕುಗಳನ್ನು ಶೇ. 100ರಷ್ಟು ಸ್ಥಳ ಪರಿಶೀಲಿಸಿ ಮಹಜರ್ ಮಾಡಿ** ಪಟ್ಟಿ ತಯಾರಿಸಿ, ಅನುಮೋದನೆಗೆ ಸಲ್ಲಿಸುವುದು.

10. ಸದರಿ ಪಟ್ಟಿಯಲ್ಲಿ ದಾಖಲಾಗದೆ ಇರುವ ಕಲ್ಲಂಗಡಿ ಮತ್ತು ಕರಬೂಜ ಬೆಳೆಗಾರರಿದ್ದಲ್ಲಿ, ಅಂತಹ ರೈತರಿಂದ ಮಾತ್ರ ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ 10 ದಿನಗಳಲ್ಲಿ ಪಡೆಯುವುದು. **ಸದರಿ ಅರ್ಜಿಗಳ ತಾಕುಗಳನ್ನು ಪರಿಶೀಲಿಸುವಾಗ ಹೆಚ್ಚಿನ ಮುತುವರ್ಜಿ ವಹಿಸುವುದು.** ನಿಗದಿತ ಅರ್ಜಿಯೊಂದಿಗೆ ಫಲಾನುಭವಿಗಳಿಂದ ಈ ಕೆಳಕಂಡ ದಾಖಲಾತಿಗಳನ್ನು ಪಡೆಯುವುದು.

I) ಪಹಣಿ (RTC)

II) ಆಧಾರ್ ಕಾರ್ಡ್,ರೈತರ ಬ್ಯಾಂಕ್ ಖಾತೆ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.

III)ಸ್ವಯಂ ಧೃಡೀಕೃತ ಘೋಷಣಾ ಪತ್ರ.

11. FRUITS ತಂತ್ರಾಂಶದಲ್ಲಿ FID ದಾಖಲಾಗದೇ ಇದ್ದಲ್ಲಿ, ಸಂಬಂದಪಟ್ಟ ದಾಖಲೆಗಳನ್ನು ಪಡೆದು ಫಲಾನುಭವಿವಾರು FID ಸೃಷ್ಟಿಸುವುದು.

12. ತಾಲ್ಲೂಕು ಮಟ್ಟದ ಸಮಿತಿಯು ಹೋಬಳಿ ಮಟ್ಟದ ಸಮಿತಿಯಿಂದ ಶಿಫಾರಸ್ಸು ಮಾಡಿದ ಧೃಢೀಕರಿಸಿದ ಪಟ್ಟಿಯನ್ನು ಪರಿಶೀಲಿಸಿ, ಹಣ್ಣು ಮತ್ತು ತರಕಾರಿ ಬೆಳೆ ಪರಿಹಾರಧನ ನೀಡಲು ಜಿಲ್ಲಾ ಮಟ್ಟದ ಸಮಿತಿಗೆ ಶಿಫಾರಸ್ಸು ಮಾಡಿ ಅನುಮೋದನೆ ಪಡೆಯುವುದು.

13. ಪರಿಹಾರಧನವನ್ನು ಜಿಲ್ಲಾ ಮಟ್ಟದ ತೋಟಗಾರಿಕೆ ಉಪ ನಿರ್ದೇಶಕರಿಗೆ ಬಿಡುಗಡೆ ಮಾಡಲಾಗುವುದು ಹಾಗೂ ಜಿಲ್ಲಾ ಸಮಿತಿಯು ಅನುಮೋದಿಸಿದ ಫಲಾನುಭವಿಗಳಿಗೆ ಬೆಳೆ ಪರಿಹಾರವನ್ನು K2-DBT Module ಮೂಲಕ ನೇರವಾಗಿ ಫಲಾನುಭವಿ ಖಾತೆಗೆ ಪಾವತಿಸುವುದು.

14. ಫಲಾನುಭವಿಯು ಹಣ್ಣು ಮತ್ತು ತರಕಾರಿ ಬೆಳೆಗಾರರಾಗಿದ್ದು, ಕಡ್ಡಾಯವಾಗಿ RTC ಯು ಅವರ ಹೆಸರಿನಲ್ಲಿರಬೇಕು.

15. ಜಂಟಿ ಖಾತೆಯಾಗಿದ್ದಲ್ಲಿ ಎಲ್ಲಾ ಖಾತೆದಾರರ ಒಪ್ಪಿಗೆ ಪತ್ರ ಸಲ್ಲಿಸಬೇಕು (Notary ಯೊಂದಿಗೆ).

16. RTC ದಾರರು ಮರಣ ಹೊಂದಿದ್ದಲ್ಲಿ ಅವರ ಮಕ್ಕಳು ಅಥವಾ ಸಂಬಂಧಿಸಿದವರು ಗ್ರಾಮ ಲೆಕ್ಕಿಗರಿಂದ ಮರಣ ದೃಢೀಕರಣ ಪತ್ರ ಪಡೆದು ಪರಿಹಾರಧನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಹೋಬಳಿ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಅವರ ಕುಟುಂಬದ ಒಪ್ಪಿಗೆ ಪತ್ರ ಪಡೆದು ಪ್ರೋತ್ಸಾಹಧನ ವಿತರಿಸುವುದು.

17. ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.

18. ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಯಾವುದೇ ಸ್ಪಷ್ಟೀಕರಣದ ಅಗತ್ಯವಿದ್ದಲ್ಲಿ ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು), ತೋಟಗಾರಿಕೆ ಜಂಟಿ ನಿರ್ದೇಶಕರು (ತರಕಾರಿಗಳು) ಮತ್ತು ತೋಟಗಾರಿಕೆ ಜಂಟಿ ನಿರ್ದೇಶಕರು (HEG-PMU), ರವರನ್ನು ಸಂಪರ್ಕಿಸುವುದು.

19. ಕಾಲ ಕಾಲಕ್ಕೆ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಚರ್ಚಿಸಿ ಯೋಜನೆ ಅನುಷ್ಠಾನಗೊಳಿಸುವುದು ಹಾಗೂ ಪ್ರಗತಿ ಪರಿಶೀಲಿಸುವುದು.

20. ಸದರಿ ಕಾರ್ಯಕ್ರಮದ ಪ್ರಗತಿ ವರದಿಯನ್ನು ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು) ಮತ್ತು ತೋಟಗಾರಿಕೆ ಜಂಟಿ ನಿರ್ದೇಶಕರು (ತರಕಾರಿಗಳು) ರವರಿಗೆ ಕಳುಹಿಸುವುದು.

## V. ಅನುಬಂಧಗಳು:

1. ಅರ್ಜಿ ನಮೂನೆ

## VI. ಅರ್ಜಿಯೊಡನೆ ಫಲಾನುಭವಿಗಳು ಸಲ್ಲಿಸಬೇಕಾಗಿರುವ ದಾಖಲಾತಿ ವಿವರಗಳು:

i. ಬೆಳೆ ಸಮೀಕ್ಷೆಯಲ್ಲಿ ನಮೂದಾಗದ ಕಲ್ಲಂಗಡಿ ಮತ್ತು ಕರಬೂಜ ಬೆಳೆಗಾರರು ಪರಿಹಾರಧನಕ್ಕೆ ನಿಗಧಿಪಡಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸುವುದು.

ii. ಆಯ್ಕೆಯಾದ ರೈತ ಫಲಾನುಭವಿಯು ಹಣ್ಣು ಮತ್ತು ತರಕಾರಿ ಬೆಳೆಗಾರನಾಗಿರುವುದಕ್ಕೆ RTC ಮೂಲ ಪ್ರತಿಯನ್ನು ಸಲ್ಲಿಸುವುದು. RTC ಮೂಲ ಪ್ರತಿಯಲ್ಲಿ ಬೆಳೆ ನಮೂದಾಗಿಲ್ಲದಿದ್ದಲ್ಲಿ ಹೋಬಳಿ ಮಟ್ಟದ ಸಮಿತಿಯು ದೃಢೀಕರಿಸುವುದು.

iii. ಪರಿಹಾರಧನವನ್ನು ಇತರರ ಹೆಸರಿನಲ್ಲಿ ಪಡೆದುಕೊಂಡು ದುರುಪಯೋಗ ಪಡಿಸಿಕೊಳ್ಳುವುದಿಲ್ಲವೆಂದು ಸ್ವಯಂ ಘೋಷಿತ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಮೇಲಿನ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.

ನಿರ್ದೇಶಕರು

# ಅರ್ಜಿ ನಮೂನೆ

2020-21ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ

ಕೋವಿಡ್-19 ಅವಧಿಯಲ್ಲಿರಾಜ್ಯದ "ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರಧನ" ಕಾರ್ಯಕ್ರಮದಡಿ

ಪ್ರೋತ್ಸಾಹ ಧನ ಕೋರಲು ಅರ್ಜಿ ನಮೂನೆ

( ಬಾಳೆ, ಕಲ್ಲಂಗಡಿ , ಕರಬೂಜ ಹಾಗೂ ಈರುಳ್ಳಿ ರೈತರಿಂದ ಮಾತ್ರ)

ತಾಲ್ಲೂಕು -------------------ಹೋಬಳಿ--------------------ಗುಚ್ಚ ----------------------

ಗೆ,

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು

(ಜಿಲ್ಲಾಪಂಚಾಯತ್)

---------------ತಾಲ್ಲೂಕು

| ಕ್ರ.ಸಂ | ವಿವರ | |
|---|---|---|
| 1 | ಅರ್ಜಿದಾರರ ಹೆಸರು | |
| 2 | ಅಂಚೆ ವಿಳಾಸ | |
| 3 | ದೂರವಾಣಿ ಸಂಖ್ಯೆ<br>ಮತದಾರರ ಗುರುತಿನ ಚೀಟಿ(Voter ID)<br>ಆಧಾರ್ ಕಾರ್ಡ್ ನಂ. | |
| 4 | ಫಲಾನುಭವಿಯ ವರ್ಗ | (ಸಾಮಾನ್ಯ /ಪಜಾ /ಪಪಂ /ಹಿ.ವರ್ಗ / ಮಹಿಳೆಯರು) |
| 5 | ಜಮೀನಿನ ವಿವರ | |
| | ಅ) ವಿಸ್ತೀರ್ಣ, ಸರ್ವೇ ನಂ | ಖುಷ್ಕಿ / ನೀರಾವರಿ |
| | ಆ)ಬೆಳೆ(ಬಾಳೆ/ಕಲ್ಲಂಗಡಿ/ಕರಬೂಜ /ಈರುಳ್ಳಿ) | ಬೆಳೆ: ವಿಸ್ತೀರ್ಣ: |
| 6 | ಫಲಾನುಭವಿ ಬ್ಯಾಂಕ್ ಹೆಸರು ಮತ್ತು ಸಂಖ್ಯೆ<br>ಹಾಗೂ IFSC code ಸಂಖ್ಯೆ | |

ಸ್ಥಳ:

ದಿನಾಂಕ:

ಫಲಾನುಭವಿಯ ಸಹಿ

---

ಸವಲತ್ತುಗಳನ್ನು ಪಡೆಯುವ ನೊಂದಣಿ ಅರ್ಜಿಯ ಸ್ವೀಕೃತಿ

ಸಂಖ್ಯೆ:---------------------- ರೈತರ ನೊಂದಣಿ ಸಂಖ್ಯೆ:----------------------------

ಶ್ರೀ/ಶ್ರೀಮತಿ-------------------------ಬಿನ್/ಕೋಂ------------------------------ಆಧಾರ್ ಸಂಖ್ಯೆ-------------------------------- -

ರವರು ಯೋಜನೆಯ ---------------------------------ಘಟಕದಡಿ ಸವಲತ್ತು ಪಡೆಯಲು ಸಲ್ಲಿಸಿರುವ ಅರ್ಜಿಯನ್ನು ದಿನಾಂಕ:----------

------------ರಂದು ಸ್ವೀಕರಿಸಿದೆ.

(ಸಹಿ/-)

ಹಿ.ಸ.ತೋ.ನಿ/ಸ.ತೋ.ನಿ.(ಜಿ.ಪಂ)/ಅವರ ಪ್ರತಿನಿಧಿ

## ಸ್ವಯಂ ದೃಢೀಕರಣ ಪತ್ರ

ಶ್ರೀ/ಶ್ರೀಮತಿ______________ ಆದ ನಾನು ______________ ಗ್ರಾಮ ____________ ತಾಲ್ಲೂಕು ______________ ಜಿಲ್ಲೆಯಲ್ಲಿ ವಾಸವಾಗಿದ್ದು. ____________ ಗ್ರಾಮದ ___________ ಸರ್ವೆ ನಂಬರ್‌ನಲ್ಲಿ ______________ ಎಕರೆ ಜಮೀನು ಹೊಂದಿದ್ದು ___________ ವಿಸ್ತೀರ್ಣದಲ್ಲಿ ______________ ಬೆಳೆ ಬೆಳೆದಿರುತ್ತೇನೆ ಹಾಗೂ ಸದರಿ ಬೆಳೆಯು ಕೋವಿಡ್-19 ಲಾಕ್ ಡೌನ್ ಸಮಯದಲ್ಲಿ(2020 ರ ಮಾರ್ಚ್ 24 ರಿಂದ ಮೇ 31 ರವರೆಗೆ) ಕಟಾವಿಗೆ ಬಂದಿರುತ್ತದೆ. ತೋಟಗಾರಿಕೆ ಇಲಾಖೆಯಿಂದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ " ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರಧನ " ಕಾರ್ಯಕ್ರಮದಡಿ ದಿನಾಂಕ: ______________ ರಂದು ರೂ. ____________ ಮೊತ್ತದ ಪರಿಹಾರಧನವನ್ನು ಪಡೆದಿರುತ್ತೇನೆ.

ಸದರಿ ಪರಿಹಾರಧನವನ್ನು ಯಾವುದೇ ತಪ್ಪು ಮಾಹಿತಿ ನೀಡದೇ ನಾನು ಬೆಳೆದಿರುವ ಬೆಳೆಗೆ ಪರಿಹಾರಧನ ಪಡೆದಿರುತ್ತೇನೆಂದು ಒಪ್ಪಿ ಈ ಮುಚ್ಚಳಿಕೆ ಪತ್ರ ಬರೆದುಕೊಟ್ಟಿರುತ್ತೇನೆ.

(ಫಲಾನುಭವಿಗಳ ಸಹಿ)

ಪೂರ್ಣ ವಿಳಾಸ : ____________________

____________________

____________________